**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 08.01.2025**

**ಪಾಟೀ ಸವಾಲುಃ ಶ್ರೀ ಎಂ ಆರ್ ಜೆ ವಕೀಲರಿಂದ**

**1** ನೇ ಪ್ರತಿವಾದಿ ನನ್ನ ಚಿಕ್ಕಮ್ಮ. **2** ನೇ ಪ್ರತಿವಾದಿ ನನ್ನ **2** ನೇ ಚಿಕ್ಕಮ್ಮ. **7** ನೇ ಪ್ರತಿವಾದಿ ನನ್ನ ಸೋದರ ಮಾವನಾಗಿದ್ದು ನಮ್ಮ ತಾತನ ಮೊದಲನೇ ಹೆಂಡತಿಯ ಮಗನಾಗಿರುತ್ತಾರೆ. ನಮ್ಮ ಅಜ್ಜನ ಹೆಸರು ಸುಂದರ. ಅವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆ ಹೆಂಡತಿಯ ಹೆಸರು ದೇವಕಿ ಅಲಿಯಾಸ್ ಜಾನಕಿ. **2** ನೇ ಹೆಂಡತಿಯ ಹೆಸರು ಪಾರ್ವತಿ ಅಲಿಯಾಸ್ ಪಾರ್ವತಮ್ಮ. ಸುಂದರ ಹಾಗೂ ದೇವಕಿ ರವರಿಗೆ ಇಬ್ಬರು ಮಕ್ಕಳಿದ್ದು ಅವರಲ್ಲಿ ಒಬ್ಬರು ಮೃತ ಪಟ್ಟಿರುತ್ತಾರೆ. ಮೃತಪಟ್ಟಿರುವ ಹೆಸರು ರಮಚಂದ್ರ ಆಗಿದ್ದು ಅವರು ಅವಿವಾಹಿತರು. ಸದರಿ ರಾಮಚಂದ್ರರವರು ನಾನು ಮೂರನೇ ತರಗತಿಯಲ್ಲಿರುವಾಗ ಮೃತಪಟ್ಟಿದ್ದು ಯಾವ ವರ್ಷ ಎಂದು ನನಗೆ ನೆನಪಿಲ್ಲ.

ದೇವಕಿಯವರ ಮರಣ ನಂತರ ಸುಂದರರವರು ಪಾರ್ವತಿಯವರನ್ನು ವಿವಾಹವಾಗಿರುತ್ತಾರೆ ಎಂದರೆ ಸಾಕ್ಷಿ ಮೊದಲೆ ವಿವಾಹವಾಗಿದ್ದು ದೇವಕಿಯವರು **2017** ರಲ್ಲಿ ಮೃತಪಟ್ಟಿರುತ್ತಾರೆ ಎನ್ನುವವರು . ಪಾರ್ವತಿಯವರು **1991** ರಲ್ಲಿ ಮೃತಪಟ್ಟಿರುತ್ತಾರೆ. ಸುಂದರ ಮತ್ತು ಪಾರ್ವತಿಯವರಿಗೆ **3** ಜನ ಹೆಣ್ಣು ಮಕ್ಕಳಿದ್ದು, ಅವರ ಹೆಸರು ಜಯಂತಿ ಅಲಿಯಾಸ್ ಜಯಮ್ಮ, ಲಲಿತಾ, ಹಾಗೂ ಲಕ್ಷ್ಮಿ ಆಗಿದ್ದಾರೆ. ನನ್ನ ತಾಯಿುಯ ಹೆಸರು ಜಯಂತಿ. ನನ್ನ ತಾಯಿು **2013** ರಲ್ಲಿ ಮೃಪಟ್ಟಿದ್ದು, ದಿನಾಂಕ ನನಗೆ ನೆನಪಿಲ್ಲ.

ಸುಂದವರರಿಂದ ಬಂದತಹ ಆಸ್ತಿಗಳು ಬೈಚನಹಳ್ಳಿ ಗ್ರಾಮದಲ್ಲಿ ಮಾತ್ರ ಇವೆ. ಪ್ರಸ್ತುತ ಹೆರೂರು ಗ್ರಾಮದಲ್ಲೂ ಆಸ್ತಿಗಳು ಇವೆ. ಸದರಿ ಸ್ವತ್ತುಗಳು ಶೆಡ್ಯೂಲ್ ಐಟಂ ನಂ **6** ರಿಂದ **9** ಆಗಿರುತ್ತದೆ. ಐಟಂ ನಂ **6** ರಿಂದ **9** ಸ್ವತ್ತುಗಳು ಪ್ರಸ್ತುತ ಯಾರ ಸ್ವಾಧೀನದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಐಟಂ ನಂ **6** ರಿಂದ **9** ಸ್ವತ್ತುಗಳಲ್ಲಿ ಏನಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳಿಗೆ ನಾನು ಭೇಟಿ ಮಾಡಿರುವುದಿಲ್ಲ. ಐಟಂ ನಂ **6** ರಿಂದ **9** ಸುಂದರ ಮತ್ತು ಅವರ ಮಕ್ಕಳ ಜಂಟಿ ಹೆಸರಿನಲ್ಲಿದ್ದು ಅದು ಸುಂದರ ರವರ ಪಿತ್ರಾರ್ಜಿತ ಸ್ವತ್ತುಗಳು ಆಗಿವೆ .

ಹಾರಂಗಿ ಜಲಾಶಯಕ್ಕೆ ಒಟ್ಟು **16** ಎಕರೆ ಮುಳಗಡೆಯಾಗಿರುತ್ತದೆ. ಆ ಸಮಯದಲ್ಲಿ ಸದರಿ ಮುಳಗಡೆಯಾದ ಸ್ವತ್ತು ಸುಂದರ ಮತ್ತು ಅವರ ಮಕ್ಕಳ ಹೆಸರನಲ್ಲಿ ಜಂಟಿಯಾಗಿತ್ತು. ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಮ್ಮ ಅಜ್ಜ ಸುಂದರರವರು **1997** ರಲ್ಲಿ ಮೃತಪಟ್ಟಿರುತ್ತಾರೆ. ಹಾರಂಗಿ ಜಲಾಶಯಕ್ಕೆ ಹೆರೂರು ಗ್ರಾಮದ ಸ್ವತ್ತನ್ನು **1972** ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಸದರಿ ಸ್ವತ್ತಿನ ಸ್ವಾಧೀನದ ನಂತರ ಸರ್ಕಾರವು ಆಸ್ತಿ ಮತ್ತು ಪರಿಹಾರದ ಹಣವನ್ನು ಎರಡನ್ನೂ ನೀಡಿರುತ್ತಾರೆ. ಪರಿಹಾರದ ಹಣ ಅಂದಾಜು ರೂ **80,000/-** ಗಳು ನೀಡಲಾಗಿದೆ. ಬದಲಿ ಆಸ್ತಿಯನ್ನು ಹತ್ತೂರು ಗ್ರಾಮದಲ್ಲಿ **7** ಎಕರೆ ಜಮೀನನ್ನು ನೀಡಲಾಗಿದೆ. ಸದರಿ ಸ್ವತ್ತಿನ ಸರ್ವೆ ನಂ ನನಗೆ ನೆನಪಿಲ್ಲ. ಸದರಿ ಸ್ವತ್ತನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಸದರಿ ಸ್ವತ್ತನ್ನು **1** ನೇ ಪ್ರತಿವಾದಿ ಮತ್ತು ಅವರ ಗಂಡ ದಾಮೋದರರವರು ಮಾರಾಟ ಮಾಡಿದ್ದು ಅದರ ಮೇಲೆ ಪ್ರಕರಣ ಬಾಕಿ ಇರುವುದರಿಂದ ಈ ಪುರಕಣದಲ್ಲಿ ಸದರಿ ಸ್ವತ್ತುಗಳನ್ನು ಸೇರಿಸಿರುವುದಿಲ್ಲ. ಸದರಿ ಪ್ರಕರಣವನ್ನು ನಾನು **1** ನೇ

ಪ್ರತಿವಾದಿ ಹಾಗೂ ಆಕೆಯ ಗಂಡ ಮತ್ತು ಖರೀದಿದಾರರ ವಿರುದ್ಧ ಸಲ್ಲಿಸಿದ್ದೇನೆ. ಸದರಿ ಪ್ರಕರಣದಲ್ಲಿ **7** ನೇ ಪ್ರತಿವಾದಿಯರನ್ನು ಪಕ್ಷಗಾರರನನ್ನಾಗಿ ಮಾಡಿದ್ದೇನೆ ಎಂದರೆ ಸರಿ.

ಸುಂದರರವರ ಇಬ್ಬರು ಪತ್ನಿಯರು ಗೃಹಿಣಿಯರು ಎಂದರೆ ಸರಿ. ಇಬ್ಬರು ಪತ್ನಿಯರಿಗೂ ವೈಯಕ್ತಿಕ ಸಂಪಾದನೆ ಇರುವುದಿಲ್ಲ. ಸುಂದರರವರು ಕೆಲವು ಪಿತ್ರಾರ್ಜಿತ ಆಸ್ತಿಗಳನ್ನು ಹಾಗೂ ಕೆಲವು ಸ್ವಂತ ಆಸ್ತಿಗಳನ್ನು ಹೊಂದಿದ್ದರು ಎಂದರೆ ಸಾಕ್ಷಿ ಸ್ವಂತ ಆಸ್ತಿ ಎಂದು ಎಲ್ಲೂ ಕಂಡು ಬಂದಿರುವುದಿಲ್ಲ ಅವು ಎಲ್ಲಾ ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ. ಸುಂದರರವರು ಅವರ ಕುಟುಂಬದ ಕರ್ತ ಆಗಿದ್ದರು ಎಂದರೆ ಸರಿ. ಅವರ ಜೀವಿತ ಕಾಲದಲ್ಲಿ ಎಲ್ಲಾ ಆಸ್ತಿಗಳ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಆಸ್ತಿ ವಿಚಾರದಲ್ಲಿ ಅವರು ಇಬ್ಬರು ಪತ್ನಿಯರು ಭಾಗಿಯಾಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

**1** ನೇ ಪ್ರತಿವಾದಿ ಈ ಪ್ರಕರಣದಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ಸುಂದರರವರು ಅವರ ಹೆಣ್ಣು ಮಕ್ಕಳ ಪರವಾಗಿ ಒಂದು ವಿಲ್ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ದಿನಾಂಕ **09.12.1996** ರಂದು ನಂಬರ್ **53/96-97** ರಂತೆ ನೋಂದಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ನಲ್ಲಿ ನನ್ನ ತಾಯಿ ಜಯಂತಿ ಹಾಗೂ ನನ್ನ ಚಿಕ್ಕಮ್ಮ ಲಕ್ಷ್ಮಿ ರವರಿಗೆ ತಲಾ ರೂ **50,000/-** ಹಣ ಜೀವನೋಪಾಯಕ್ಕಾಗಿ ನೀಡಬೇಕು ಎಂದು **1** ನೇ ಪ್ರತಿವಾದಿಗೆ ನಿರ್ದೇಶನ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ನನ್ನ ತಾಯಿಗೆ ಸಂಬಂಧಪಟ್ಟ ಆಸ್ತಿಯನ್ನು

ಕೇಳುತ್ತಿದ್ದೇನೆ ಎಂದರೆ ಸರಿ. ನನ್ನ ತಾಯಿಯು ಹಾಗೂ ಲಕ್ಷ್ಮೀ ರವರೂ **1** ನೇ ಪ್ರತಿವಾದಿಯಿಯಂದ ರೂ **50,000/-** ಗಳು ಬದಲಾಗಿ ತಲಾ ರೂ **1,50,000/-** ಹಣ ಪಡೆದು ಒಂದು ಕರಾರಿಗೆ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸುಂದರರವರು ವಿಲ್ ನಲ್ಲಿ ತಿಳಿಸಿರುವಂತೆ ನನ್ನ ತಾಯಿಯು ಹಾಗೂ ಲಕ್ಷ್ಮೀರವರಿಗೆ ಅದರಲ್ಲಿ ತಿಳಿಸಿರುವ ಹಣವನ್ನು ಹೊರತುಪಡಿಸಿ ಬೇರೆ ಯಾವುದೆ ಹಕ್ಕು ಇಲ್ಲ ಎಂದರೆ ಸಾಕ್ಷಿ ವಿಲ್ ಬಗ್ಗೆ ನನಗೆ ಗೊತ್ತಿಲ್ಲ ಎನ್ನುವವರು .

**1** ನೇ ಪ್ರತಿವಾದಿ ಈ ಪ್ರಕರಣದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ ವಿಲ್ ನ ಬಗ್ಗೆ ನೋಂದಣಾಧಿಕಾರಿಗಳು ಕಚೇರಿಯಲ್ಲಿ ಆರ್ ಟಿ ಐ ನಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇಲ್ಲಿಯವರೆಗೆ ಅದರ ಪ್ರತಿ ನನಗೆ ದೊರೆತಿಲ್ಲ. ಸದರಿ ಅರ್ಜಿಯನ್ನು ನಾನು ಅಂದಾಜು **2022** ರಲ್ಲಿ ಸಲ್ಲಿಸಿದ್ದೇನೆ. ನೋಂದಣಾಧಿಕಾರಿಗಳ ಕಚೇರಿಯಿಯಂದ ಇಲ್ಲಿಯವರೆಗೆ ಯಾವುದೆ ಉತ್ತರ ಬಂದಿರುವುದಿಲ್ಲ. ಸದರಿ ದಾಖಲೆ ಇನ್ನೂ ದೊರೆತಿಲ್ಲ ಎಂದು ಮೇಲ್ಮನವಿಯನ್ನು ಸಲ್ಲಿಸಿದ್ದು ಮೇಲ್ಮನವಿಯಲ್ಲಿ ಸದರಿ ದಾಖಲೆ ನೀಡುವಂತೆ ಸೂಚಿಸಿದ್ದು ಅದರ ಪ್ರತಿಯನ್ನು ನನಗೆ ನೀಡಿದ್ದಾರೆ . ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೆ ತೊಂದರೆ ಇಲ್ಲ.

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ